ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ 01 V2 ಸಿಡಿಸಿ (2) 2017-18 /1527

ನಿರ್ದೇಶಕರ ಕಛೇರಿ
ಅರಮನೆ ರಸ್ತೆ
ಬೆಂಗಳೂರು 560 001
ದಿ: 21-08-2018

**-:ಸುತ್ತೋಲೆ:-**

ವಿಷಯ: ಮಲೆನಾಡು ತಾಂತ್ರಿಕ ಮಹಾವಿದ್ಯಾಲಯ, ಹಾಸನ, ಇಲ್ಲಿ TEQIP-III Phase ನ ಅಡಿಯಲ್ಲಿ ಹಮ್ಮಿಕೊಂಡಿರುವ ಅಲ್ಪಾವಧಿ ತರಬೇತಿ ಕಾರ್ಯಕ್ರಮಕ್ಕೆ ಅನುಮತಿ ನೀಡುವ ಬಗ್ಗೆ.

ಉಲ್ಲೇಖ: ಪ್ರಾಚಾರ್ಯರು, ಮಲೆನಾಡು ತಾಂತ್ರಿಕ ಮಹಾವಿದ್ಯಾಲಯ, ಹಾಸನ, ಇವರ ಪತ್ರ ಸಂ:ಎಂಸಿಇ/ಆಪ್ತಕೊಠಡಿ/2018/2145, ದಿನಾಂಕ:20-08-2018.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದನ್ವಯ TEQIP-III Phase ನ ಅಡಿಯಲ್ಲಿ ಪ್ರಾಯೋಜಿತ ದಿನಾಂಕ:27-08-2018 ರಿಂದ ದಿನಾಂಕ:31-08-2018ರವರೆಗೆ "Design of Thermal Systems" ಎಂಬ ವಿಷಯದಲ್ಲಿ ಮಲೆನಾಡು ತಾಂತ್ರಿಕ ಮಹಾವಿದ್ಯಾಲಯ, ಹಾಸನ, ಇಲ್ಲಿನ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದಲ್ಲಿ ರಾಜ್ಯದ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ ಅಲ್ಪಾವಧಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಉದ್ದೇಶಿಸಿದ್ದು, ಸದರಿ ಅಲ್ಪಾವಧಿ ತರಬೇತಿ ಕಾರ್ಯಕ್ರಮವನ್ನು ಸಂಸ್ಥೆಯಲ್ಲಿ ಆಯೋಜಿಸಲು ಅನುಮತಿ ನೀಡಲಾಗಿದೆ.

ಸದರಿ ಅಲ್ಪಾವಧಿ ತರಬೇತಿಗೆ ಹಾಜರಾಗಲು ಇಚ್ಚಿಸುವ ಬೋಧಕ ಸಿಬ್ಬಂದಿ ವರ್ಗದವರು, www.mcehassan.ac.inನಲ್ಲಿ ಅರ್ಜಿಯನ್ನು ಡೌನ್ ಲೋಡ್ ಮಾಡಿ, ನೊಂದಾಯಿಸಿಕೊಳ್ಳಬಹುದಾಗಿದೆ. ಸದರಿ ತರಬೇತಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು, ಸಂಯೋಜನಾಧಿಕಾರಿಯಾದ ಡಾ॥ ಇಜಿಲ್ ವನ್ನನ್ ಎಸ್., ಪ್ರಾಧ್ಯಾಪಕರು, ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗ, ಮಲೆನಾಡು ತಾಂತ್ರಿಕ ಮಹಾವಿದ್ಯಾಲಯ, ಹಾಸನ, ಇವರನ್ನು ಮೊಬೈಲ್ ಸಂಖ್ಯೆ: 9845575450 / 9902403967 ಅಥವಾ ಈ-ಮೇಲ್ ಐಡಿ evs@mcehassan.ac.in/ ezhilsil@yahoo.co.in ಮೂಲಕ ಸಂಪರ್ಕಿಸಲು ಸೂಚಿಸಲಾಗಿದೆ.

ತರಬೇತಿಯನ್ನು ಆಯೋಜಿಸಿರುವ ಸಂಸ್ಥೆಯ ಪ್ರಾಚಾರ್ಯರು, ತರಬೇತಿಗೆ ಆಯ್ಕೆಗೊಂಡ ಸರ್ಕಾರಿ/ಅನುದಾನಿತ ಸಂಸ್ಥೆಗಳ ಬೋಧಕ ಸಿಬ್ಬಂದಿ ವರ್ಗದವರ ಪಟ್ಟಿಗೆ ದಿನಾಂಕ:24-08-2018ರೊಳಗಾಗಿ ನಿರ್ದೇಶನಾಲಯದ ಅನುಮೋದನೆ ಪಡೆದು ತರಬೇತಿ ನಡೆಸಲು ಸೂಚಿಸಲಾಗಿದೆ. ಈ ಅಲ್ಪಾವಧಿ ತರಬೇತಿಗೆ ಇಲಾಖೆಯಿಂದ ಯಾವುದೇ ಪ್ರಯಾಣ ಭತ್ಯೆ ಹಾಗೂ ದಿನ ಭತ್ಯೆಗಳನ್ನು ನೀಡುವುದಿಲ್ಲ.

ಜಂಟಿ ನಿರ್ದೇಶಕರು(ಸಿಡಿಸಿ)

ಇವರಿಗೆ:- ಪ್ರಾಚಾರ್ಯರು, ಮಲೆನಾಡು ತಾಂತ್ರಿಕ ಮಹಾವಿದ್ಯಾಲಯ, ಹಾಸನ, ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.

ಪ್ರತಿ:-
1. ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ/ಇಂನಿಯರಿಂಗ್ ಕಾಲೇಜುಗಳ ಪ್ರಾಚಾರ್ಯರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
2. ಇ-ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, 2ನೇ ಮಹಡಿ, ಬೆಂಗಳೂರು ಇವರಿಗೆ ಡಿಟಿಇ ವೆಬ್ ಸೈಟ್ ನಲ್ಲಿ ಪ್ರಕಟಿಸಲು ಮುಂದಿನ ಕ್ರಮಕ್ಕಾಗಿ.